ನಿಗೂಢತೆಯ ಬಲೆಯಲ್ಲಿ ರೈತ ಬಲಿಯಾದರೆ ಅಭಿವೃದ್ಧಿಗೆ ಭವಿಷ್ಯವಿಲ್ಲದಂತಾಗುತ್ತದೆ. ಆದ ಪ್ರಯುಕ್ತ ಸರ್ಕಾರ ಬೆಳೆದು ನೆರವಿಗೆ ನಿಂತಿರುವ ಈ ಸಿರಿ ಸಂಪತ್ತನ್ನು ಉಳಿಸಲೇಬೇಕೆಂಬ ಫಲದಿಂದಲಾದರು ಸರ್ಕಾರದ ವೆಚ್ಚದಿಂದಲೇ ನೀರು ದೊರೆಯುವ ಎಡೆಯಲ್ಲೂ ಈ ಸೀಮಿತ ತೆಂಗಿನ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ನೀರುಣಿಸಿ ರೈತನಿಗೆ ಉಪಕರಿಸಿದರೆ ರೈತನು ನಮಿಸಿ ಉದ್ಧಾರವಾಗುವನೆಂಬ ಆಶಯ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

## XV Sanction of Posts to the office of the Deputy Director of Collegiate Education Mangalore

SRI BLASIUS M. D'SOUZA (Mangalor ).—The office of the Regional Deputy Director of Collegiate Education was started at Mangalore with an intention of speedy disposal of files relating to colleges of this region. But the intention with which this office was started is not being fulfilled since the staff required to this office has not been sanctioned. There is only one Superintendent and one Clerk-*cum*-Typist which will not be sufficient. Hence, I urge the Government to sanction at least four Superintendents and four Clerks immedately in view of the density of colleges in this region.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಕೊಲಿಜಿಯೇಟ್ ಎಜುಕೇಷನ್ ನಿರ್ದೇಶಕರಿಗೆ ಆದೇಶ ನೀಡಿ ಅಲ್ಲಿಗೆ ಹೆಚ್ಚಿನ ಸಿಬ್ಬಂದಿ ವರ್ಗದ ಆವಶ್ಯಕತೆ ಇದೆಯೋ ಇಲ್ಲವೆ ಎಂಬ ಬಗ್ಗೆ ವರದಿ ನೀಡಬೇಕೆಂದು ತಿಳಿಸಿ ಒಂದು ವೇಳೆ ಹೆಚ್ಚಿನ ಸಿಬ್ಬಂದಿವರ್ಗದ ಅವಶ್ಯಕತೆ ಇದೆಯೆಂದು ತಿಳಿದುಬಂದರೆ ಖಂಡಿತವಾಗಿಯೂ ಮಂಜೂರು ಮಾಡಿಸಿಕೊಡುತ್ತೆನೆ.

## XVI. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿ ಮಳೆ ಬೀಳದೆ ಭೀಕರ ಪರಿಸ್ಥಿತಿ ಉಂಟಾಗಿರುವುದು

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನಲ್ಲಿ ಮಳೆ ಬೀಳದೆ ಇರುವಾಗ ಸರ್ಕಾರ ಬರಗಾಲ ಕಾಮಗಾರಿ ಕೆಲಸಗಳನ್ನು ನಿಲ್ಲಿಸಿರುವುದರಿಂದ ಜನರು ತುಂಬಾ ಕಷ್ಟದಲ್ಲಿದ್ದು ಕಾಮಗಾರಿ ಕೆಲಸಗಳನ್ನು ಮುಂದುವರೆಸುವಂತೆ ಮತ್ತು ದನಕರುಗಳಿಗೆ ಮೇವು ಒದಗಿಸಲು ಒತ್ತಾಯಿಸಿ ಸಿಂಧಗಿಯ ರೈತರು ತಾ, ೧೫-೮-೮೬ರಿಂದ ಜೈಲು ಭರೋ ಕಾರ್ಯಕ್ರಮ ನಡೆಸುತ್ತಿದ್ದಾರೆ. ತಾ. ೧೯-೮-೮೬ರಂದು ೩೨೦ ಜನ ರೈತರು ಜೈಲು ಸೇರಿದ್ದಾರೆಂದು ಟೆಲಿಗ್ರಾಂ ಬಂದಿದೆ. ಪರಿಸ್ಥಿತಿ ಭೀಕರವಾಗಿರುವುದರಿಂದ ಇದರ ಬಗ್ಗೆ ಸದನದಲ್ಲಿ ಸಂಬಂಧಪಟ್ಟ ಸಚಿವರೇ ಹೇಳಿಕೆ ನೀಡಲು ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಬರಗಾಲ ಪರಿಸ್ಥಿತಿಯ ಬಗ್ಗೆ ಇದೇ ತಿಂಗಳ ೪ನೇ ತಾರೀಖು ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದಿದ್ದೆವು. ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಬಿದ್ದಿಲ್ಲ ಎಂಬ ಮಾಹಿತಿಯನ್ನು ನಾವು ತೆಗೆದುಕೊಂಡಿದ್ದೇವೆ. ಅಲ್ಲದೆ ಈ ತಿಂಗಳ ೧೫ನೇ ತಾರೀಖಿನವರೆಗೆ ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಬಿದ್ದಿಲ್ಲ ಎಂಬ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸುತ್ತೇವೆಂದು ಅವರು ಹೇಳಿದ್ದಾರೆ. ಅವರ ವರದಿ ಬಂದಕೂಡಲೇ ಎಲ್ಲೆಲ್ಲಿ ಮಳೆ ಬಿದ್ದಿಲ್ಲ ಅಂಥ ಕಡೆ ಮುಂದೆ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆಯೆಂದು ಹೇಳಬಯಸುತ್ತೇನೆ.